# ಐಎಎಸ್ ಮಾಡಬೇಕು

## ರಕ್ಷಾ ಗೌಡ

### ಸ್ಟಾರ್ ಸುವರ್ಣದ 'ಪುಟ್ಟಮಲ್ಲಿ'ಯ ಪುಟ್ಟಮಲ್ಲಿ



★ *ಅಭಿನಯದ ಆರಂಭದ ದಿನಗಳು ಹೇಗಿದ್ದವು?*

ತುಂಬಾ ಕಷ್ಟದ ದಿನಗಳು ಅವು. ನಟನೆ ಅಂದರೆ ಏನೂ ಗೊತ್ತೇ ಇರಲಿಲ್ಲ. ಬಣ್ಣ ಹಚ್ಚಿದ ಮೇಲೆ ನೋಡಿ ನೋಡಿ ಅಭಿನಯವನ್ನು ಕಲಿತಿದ್ದೇನೆ. 'ರಾಧಾ ರಮಣ'ದಲ್ಲಿ ನನ್ನ ಫೋಟೋ ನೋಡಿಯೇ ಸೆಲೆಕ್ಟ್ ಮಾಡಿದ್ದರು. ಇದು ನನ್ನ ಎರಡನೇ ಧಾರಾವಾಹಿ. ಆರಂಭದಲ್ಲಿ ನಿರ್ದೇಶಕರು ಎಲ್ಲಾ ಪಾತ್ರಗಳಿಗೆ ಹೇಳುವುದನ್ನು ಕೇಳುತ್ತಿದ್ದೆ. ಪ್ರತಿ ಪಾತ್ರಗಳನ್ನೂ ಚಿತ್ರೀಕರಣದ ಸಂದರ್ಭದಲ್ಲಿ ಗಮನಿಸುತ್ತಿದ್ದೆ. ಟಿವಿಯನ್ನೂ ತಪ್ಪದೆ ನೋಡುತ್ತಿದ್ದೆ. ಆಮೂಲಕ ನನ್ನಲ್ಲಿಯೇ ವಿಮರ್ಶಾ ಬುದ್ಧಿ ಬೆಳೆಯಿತು. ನನ್ನ ಅಭಿನಯದ ತಪ್ಪುಗಳನ್ನು ಗುರುತಿಸಿಕೊಂಡು ಅದನ್ನು ತಿದ್ದುವ ಬಗ್ಗೆ ಯೋಚನೆ ಮಾಡುತ್ತಿದ್ದೆ. ಅದು ನನಗೆ ನಟನೆ ಕಲಿಯಲು ತುಂಬಾ ಸಹಾಯ ಮಾಡಿತು.

★ *ಪುಟ್ಟಮಲ್ಲಿ ಹೇಗಿದ್ದಾಳೆ?*

ಪುಟ್ಟಮಲ್ಲಿ ಹಳ್ಳಿಯ ಹುಡುಗಿ. ಅನಿವಾರ್ಯ ಕಾರಣಕ್ಕೆ ಪಟ್ಟಣವನ್ನು ಸೇರುತ್ತಾಳೆ. ಅವಳಿಗೆ ಒಳ್ಳೆಯದನ್ನು ಮಾಡುವುದು ಮಾತ್ರ ಗೊತ್ತು. ಎಂದೂ ಯಾರಿಗೂ ಕೇಡನ್ನು ಬಗೆಯುವವಳಲ್ಲ. ಸರಿ– ತಪ್ಪುಗಳನ್ನು ಅರಿಯದಷ್ಟು ಮುಗ್ಧಳು ಕೂಡ ಆಕೆ ಅಲ್ಲ. ತನಗೆ ಯಾರೇ ಎಂತಹ ಅನ್ಯಾಯವನ್ನೇ ಮಾಡಿದ್ದರೂ ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಅಪಕಾರ ಮಾಡಿದ್ದಾರೆ ಎಂದು ಯಾರ ಮೇಲೂ ಹಗೆಯನ್ನು ತೀರಿಸಿಕೊಳ್ಳುವ ಹುಡುಗಿಯಲ್ಲ. ದುಷ್ಟರೇ ಇರಲಿ, ಶಿಷ್ಟರೇ ಇರಲಿ ಎಲ್ಲರನ್ನೂ ಪ್ರೀತಿಯಿಂದ ನೋಡುವುದು ಆಕೆಯ ಸಹಜ ಗುಣ. ತನ್ನ ಸಹಜೀವಿಗಳಿಗೆ ಎಲ್ಲರಿಗೂ ಸಹಾಯ ಮಾಡುತ್ತಾಳೆ.

★ *ಏನಾಗಬೇಕು ಅಂದುಕೊಂಡಿದ್ದೀರಿ..?*

ಓದು ಮುಗಿದಿಲ್ಲ. ಇನ್ನೂ ಬಿಬಿಎ ಓದುತ್ತಿದ್ದೇನೆ. ಓದುತ್ತಲೇ ಅಭಿನಯವನ್ನೂ ಮಾಡುತ್ತಿದ್ದೇನೆ. ಪಿಯು ಓದುವ ತನಕ ವೈದ್ಯೆ ಆಗಬೇಕು ಎಂದೇ ಯೋಚಿಸುತ್ತಿದ್ದೆ. ಈಗ ಐಎಎಸ್ ಮಾಡಬೇಕು ಎನ್ನುವ ಆಶೆ ಮೂಡಿದೆ. ಅದಕ್ಕಾಗಿ ತಯಾರಿಯನ್ನು ನಡೆಸಿಲ್ಲ. ಆದರೆ ಒಂದು ಪ್ರಯತ್ನವನ್ನು ಮಾಡಬೇಕು ಎಂದುಕೊಂಡಿದ್ದೇನೆ. ಡಿಗ್ರಿ ಮುಗಿದ ನಂತರ ಆ ಬಗ್ಗೆ ಯೋಚಿಸಬೇಕು.

★ *ನಟರಾಗಬೇಕು ಎಂದರೆ ಏನು ಮಾಡಬೇಕು?*

ಗ್ರಹಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಎಲ್ಲರಲ್ಲಿಯೂ ಒಬ್ಬ ನಟ ಇದ್ದೇ ಇರುತ್ತಾನೆ. ಅದಕ್ಕೊಂದು ಉದಾಹರಣೆ ಎಂದರೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಏನಾದರೂ ಸುಳ್ಳನ್ನು ಹೇಳಿರುತ್ತೇವೆ. ಆಗ ಸುಳ್ಳು ಸತ್ಯ ಎನ್ನುವಂತೆ ಬಿಂಬಿಸಲು ನಾಟಕವನ್ನು ಮಾಡುತ್ತೇವೆ. ಹಾಗೆಯೇ ಭಿನ್ನ ಭಿನ್ನ ಗುಣಗಳನ್ನು ಅಭಿನಯಿಸಬೇಕು ಎಂದರೆ ಭಿನ್ನ ಭಿನ್ನ ಜನರ ಹಾವಾಭಾವಗಳನ್ನು ಗಮನಿಸಬೇಕು. ಸಿನಿಮಾ ಟಿವಿಗಳಲ್ಲಿಯೂ ಅಭಿನಯವನ್ನು ನೋಡುತ್ತಿರಬೇಕು. ಅದೇ ಕ್ರಮೇಣ ನಟಿಸುವಂತೆ ಮಾಡುತ್ತದೆ.

★ *ನಿಮ್ಮ ನಿತ್ಯದ ಜೀವನ ಶೈಲಿ ಹೇಗಿದೆ?*

ಡಾನ್ಸ್ ಮಾಡುತ್ತೇನೆ. ಐದು ವರ್ಷ ಶಾಸ್ತ್ರೀಯವಾಗಿ ಭರತ ನಾಟ್ಯವನ್ನು ಅಭ್ಯಾಸ ಮಾಡಿದ್ದೆ. ಆಮೇಲೆ ಬಿಟ್ಟು ಬಿಟ್ಟೆ. ಈಗ ಸಮಕಾಲಿನ ಸಿನಿಮಾ ಡಾನ್ಸ್ ಅಭ್ಯಾಸ ಮಾಡುತ್ತಿದ್ದೇನೆ. ಚಿತ್ರ ಬಿಡಿಸುವುದು ನನ್ನ ಹವ್ಯಾಸಗಳಲ್ಲಿ ಒಂದು, ಪೆನ್ಸಿಲ್ ಸ್ಕೆಚ್ ಇಷ್ಟ. ಅದರಲ್ಲೂ ಪೋರ್ಟ್‌ರೇಟ್ ಮಾಡುವ ಬಗ್ಗೆ ಆಸಕ್ತಿ ಹೆಚ್ಚಿದೆ.

■ ರಾಘವೇಂದ್ರ